ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಫಿಕೇರ್ಷ.

ತಾರೀಖು 17ನೇ ಫಿಬ್ರವರಿ 1896ನೇ ಇಸವಿ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—95—96ನೇ ಸಾಲಿನ ಜಂಗಲ್ ಪಸಾರೇ ಜಿನಸಿಗಳು ಅವಾನಿ ಜವಾಯಿಸಿದ್ದು ಈ ಕೆಳಗೆ ಕಂಡಂತೆ 96ನೇ ಇಸವಿ ಮಾರ್ಚಿ 24ನೇ ತಾರೀಖು ಬೆಳಿಗ್ಯೆ 8 ಘಂಟೇಲಿ ಬಂಗಳೂರು ಸಂದಲ್ ಕೋರ್ಟಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ:—

	ಜಿನಸಿಗಳ ತಪ್ಸೀಲು.	ಮೊತ್ತ.	ಪರಾ.
1	ಆಳಲೇಕಾಯಿ	5 ಟ್ಯಗಳು	ಹೆಚ್ಚು ಕಡಮೆ
2	ಅರಗುಪುಡಿ	1 ಟ್ಯ	ಡಿಟೋ
3	ಆಳಲೇಕಾಯಿ ಹೊಟ್ಟು	½ ಟ್ಯ	ಡಿಟೋ

2. ಹರಾಜಿನಲ್ಲಿ ತೆಗದುಕೊಂಡವರೇ ಹರಾಜಾದ ಅಥವಾ ಮೊಬಲಗು ಕೊಟ್ಟ ತಾರೀಖು ಲಾಗಾಯತು ಆ ಜಿನಸಿಗಳ ರೇಟೆ ಮಾಡಿಕೊಳ್ಳತಕ್ಕದ್ದು.

3. ಹರಾಜು ಖೈದಾದ ತಕ್ಷಣವೇ ಕೇಕಡಾ 25 ರೂಪಾಯಿ ಮೇರೆ ಡಿಪಾಜಿಟ್ ಹಾಜರ್ಮಾಡಿ, ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ಬಂದು ವಾರದಲ್ಲಿ ಕೊಡಬೇಕು. ತಪ್ಪಿದರೆ ಆ ಜಿನಸು ಪುನಹ ಹರಾಜು ಮಾಡಿ ಲುಕ್ಸಾನಿಗೆ ಮೊದಲಿನ ಸವಾಲ್‌ದಾರನ್ನು ಗುರಿಮಾಡುತ್ತೆ. ಹರಾಜು ತಾರೀಖು ಲಾಗಾಯತು 10 ದಿವಸಗಳೊಳಗಾಗಿ ಜಿನಸನ್ನು ಸಾಗಿಸಿಕೊಳ್ಳಬೇಕು. ಇನ್ನೂ ಬೇಕಾದ ತಪ್ಸೀಲುಗಳಿಗೆ 1895ನೇ ಏಪ್ರಿಲ್ 25ನೇ ಮಕ್ಕಂ 15229.—ಆ5. ಎಫ್. 155-92ನೇ ನಂಬರ್ ನೋಟಿಫಿಕೇರ್ಷ ನೋಡಿಕೊಳ್ಳಬೇಕು. ಆದು ಹರಾಜು ಕಾಲದಲ್ಲಿ ಓದಲ್ಪಡುತ್ತೆ.

ವೈ. ಶೇತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ತುಮಕೂರು ಡಿಸ್ಟ್ರಿಕ್ಟ್.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜ್.

ಇಸ್ತಿಹಾರ್.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ತಾರದ ಸವಾಲಿಗೆ ಪೇಲ್ಸಟ್ಟು ಆಬ್ಜೆರ್ ಜೆಡ ಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದ ಕೂಡ್ಲೆ ಜಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿನವು ಸರ್ತಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನು ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಕೇದಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಪೂರ್ವ ಹರಾಜ್‌ದಾರನು ಸದರೀ ಸ್ವತ್ತಿಗೇ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡಿಪ್ಯೂಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಪೂರ್ವ ಹರಾಜ್‌ದಾರನ ಸವಾಲ್ ಮೊಬಲಗ್ಗಿಂತಲೂ ಕಮ್ಮಿಯಾದಲ್ಲಿ ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಮುವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಡಿಪ್ಯೂಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ, ಅಥವಾ ಮತ್ತೊಬ್ಬರ ಮುಖ್ತಾರೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುಖ್ತಾರೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಆವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜ್ ಕಾಯಮಾದನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಆರ್ಡೆರಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್‌ದಾರ್‌ರಿಂದ ಹೊಂದುವನು.